# <u>ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ</u>

## <u>ಹಿರೇಕೆರೂರು</u>

ಸಿ.ಸಿ. ನಂಃ 1054/2021

ಸಿ.ಡಬ್ಲ್ಯೂಃ 18 ಪಿ.ಡಬ್ಲ್ಯೂಃ 6

| | | |
|---|---|---|
| ಹೆಸರು | : | ರುದ್ರಗೌಡ |
| ತಂದೆಯ ಹೆಸರು | : | ರೇವಣಗೌಡ ಪಾಟೀಲ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಪಿ. ಐ |
| ವಾಸ ಸ್ಥಳ | : | ಶಿಕಾರಿಪುರ. |

ದಿನಾಂಕಃ 23-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ 05-04-2021 ರಿಂದ ದಿಃ 09-08-2023 ರವರೆಗೆ ನಾನು ಹಿರೇಕೆರೂರು ಪೋಲಿಸ ಠಾಣೆಯಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 09-04-2021 ರಂದು ಚಾಸಾ-15 ರವರಿಂದ ಪ್ರಕರಣದ ತನಿಖೆಯನ್ನು ವಹಿಸಿಕೊಂಡು, ಕಡತವನ್ನು ಪರಿಶೀಲಿಸಿ, ಅದೇ ದಿನ ಹಿರೇಕೆರೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಬೇಟಿ ನೀಡಿ ಪಂಚರಾದ ಚಾಸಾ-2 ಮತ್ತು 3 ಅವರಿಗೆ ನೋಟಿಸ ಜಾರಿ ಮಾಡಿ, ಕರೆಸಿ, ಅವರ ಸಮಕ್ಷಮ ಮೃತ ಹೇಮಪ್ಪನ ಶವಪಂಚನಾಮೆಯನ್ನು ಬೆಳಿಗ್ಗೆ 10-00 ರಿಂದ 12-00 ಗಂಟೆಯವರೆಗೆ ಮಾಡಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-7(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ 4 ಭಾವ ಚಿತ್ರ ತೆಗೆದಿದ್ದೇನೆ, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-8 ರಿಂದ 11 ಎಂದು ಗುರುತಿಸಲಾಗಿದೆ.

3. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-4 ಮತ್ತು 5 ರವರನ್ನು ಹಾಜರು ಪಡಿಸಿಕೊಂಡು ಚಾಸಾ-1 ರವರು ತೋರಿಸಿದಂತೆ ಪಂಚನಾಮೆಯನ್ನು ಮಧ್ಯಾಹ್ನ 1-00 ರಿಂದ 1-45 ರವರೆಗೆ ಮಾಡಿ ಸಹಿ ಪಡೆದಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ 3 ಭಾವ ಚಿತ್ರ ತೆಗೆದಿದ್ದೇನೆ, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-4 ರಿಂದ 6 ಎಂದು ಗುರುತಿಸಲಾಗಿದೆ.

4. ಅಪಘಾತದ ಸ್ಥಳದಿಂದ ಲಾರಿಯ ಮುರಿದ ಇಂಡಿಕೇಟರ ಬಣ್ಣದ ತುಕಡಿ, ತುಂಡು ಬಟ್ಟೆ ಹಾಗೂ ರಿಪ್ಲೇಕ್ಟರ ಪಟ್ಟಿ ಹಾಗೂ ಮುರಿದ ಇಂಡಿಕೇಟರ್ ಗಳನ್ನು ವಶಪಡಿಸಿಕೊಂಡು ಅದನ್ನು ಮಾಲುಪಟ್ಟಿಯಲ್ಲಿ ನಮೂದಿಸಿದ್ದೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಒಟ್ಟಾಗಿ ಈಗಾಗಲೇ ಮುದ್ದೆ ಮಾಲು -1 ಎಂದು ಗುರುತಿಸಲಾಗಿದೆ. ಅದೇ ಚಾಸಾ-16 ಅವರಿಗೆ ಅಪಘಾತದಲ್ಲಿ ಭಾಗಿಯಾದ ಕೆ.ಎ.20/ಸಿ-7129 ಲಾರಿಯನ್ನು ಹಾಜರು ಪಡಿಸಲು ನೋಟಿಸ್ ಕೊಟ್ಟಿದ್ದೇನೆ. ಅವರು ಲಾರಿಯನ್ನು ಹಾಜರು ಪಡಿಸಿದರು. ಅದನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಹಿರೇಕೆರೂರು ಪೋಲಿಸ ಠಾಣೆಯ ಆವರಣದಲ್ಲಿ ಪಂಚನಾಮೆಯ ಮೂಲಕ ವಶಪಡಿಸಿಕೊಂಡಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-12(ಸಿ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ 9 ಭಾವ ಚಿತ್ರ ತೆಗೆದಿದ್ದೇನೆ, ಅವುಗಳ ಪೈಕಿ 2 ನ್ನು ಅವುಗಳನ್ನು ಈಗಾಗಲೇ ನಿಪಿ-13 ಮತ್ತು 14 ಎಂದು ಗುರುತಿಸಲಾಗಿದೆ.

5. ಪಂಚನಾಮೆ ಕಾಲದಲ್ಲಿ ಲಾರಿಯ ಮುಂಭಾಗದ 3 ಇಂಚು ಉದ್ದದ ಬಟ್ಟೆಯನ್ನು ಜಪ್ತಿ ಮಾಡಿ ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಅದೇ ದಿನ ಚಾಸಾ-4 ರಿಂದ 12 ರವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದೇನೆ. ಅದೇ ದಿನ ಅಪಘಾತದಲ್ಲಿ ಭಾಗಿಯಾದ ಲಾರಿಯನ್ನು ತಾಂತ್ರಿಕ ಪರೀಕ್ಷೆ ಮಾಡಲು ಚಾಸಾ-14 ರವರಿಗೆ ಕೇಳಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಾಹನದ ವರದಿಯನ್ನು **ನಿಪಿ-16** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-16(ಎ)** ಎಂದು ಗುರುತಿಸಲಾಯಿತು. ದಿಃ 12-04-2021 ರಂದು GPA Holder ಅವರಿಗೆ ನೋಟಿಸ್ ನೀಡಿ ಉತ್ತರ ಪಡೆದಿದ್ದೇನೆ. ಸದರಿ ಉತ್ತರವನ್ನು ಸಾಕ್ಷಿ ಗುರುತಿಸಿದ್ದು,ಅದನ್ನು **ನಿಪಿ-17** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-17(ಎ)** ಎಂದು ಗುರುತಿಸಲಾಯಿತು. ಅದೇ ದಿನ GPA Holder ಇಂಡೆಮಿನಿಟಿ ಬಾಂಡ್ ನ್ನು ಪಡೆದು ವಾಹನ ಬಿಡುಗಡೆ ಮಾಡಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು **ನಿಪಿ-18** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-18(ಎ)** ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿಯನ್ನು ಬಂಧಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದೇನೆ. ಆತನನ್ನು ನೋಡಿದರೆ ಗುರುತಿಸುತ್ತೇನೆ, ಆತನು ಇದು ನ್ಯಾಯಾಲಯದಲ್ಲಿ ಇದ್ದಾನೆ.

6. ದಿಃ 20-04-2021 ರಂದು ಚಾಸಾ-13 ರವರಿಂದ ಮೃತ ಹೇಮಪ್ಪ ಅವರ ಶವ ಪರೀಕ್ಷಾ ವರದಿಯನ್ನು ಪಡೆದಿದ್ದೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು **ನಿಪಿ-19** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-19(ಎ)** ಎಂದು ಗುರುತಿಸಲಾಯಿತು.

7. ದಿಃ 10-05-2021 ರಂದು ಚಾಸಾ-17 ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ.65(ಬಿ) ಅಡಿಯಲ್ಲಿ ಪ್ರಮಾಣ ಪತ್ರ ಮತ್ತು ಸಿಡಿಯನ್ನು ಪಡೆದಿದ್ದೇನೆ, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ, ಸದರಿ ಪ್ರಮಾಣ ಪತ್ರವನ್ನು **ನಿಪಿ-20** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-20(ಎ)** ಎಂದು ಗುರುತಿಸಲಾಯಿತು. ಸದರಿ ಸಿಡಿಯನ್ನು ಈಗಾಗಲೇ ನಿಪಿ-4(ಎ) ಎಂದು ಗುರುತಿಸಲಾಗಿದೆ. ಚಾಸಾ-15 ರವರು ದಾಖಲಿಸಿದ್ದ ಪ್ರ. ವ. ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು **ನಿಪಿ-21** ಎಂದು ಗುರುತಿಸಲಾಯಿತು.

8. ಅದೇ ದಿನ ಚಾಸಾ-17 ರವರ ಹೇಳಿಕೆ ಪಡೆದಿದ್ದೇನೆ. ದಿಃ 15-06-2021 ರಂದು ರಂದು ಆರೋಪಿಯ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ. ಹೆಚ್. ಪಿ. ವಕೀಲರಿಂದಃ**

ನಾನು ಚಾಸಾ-15 ರವರಿಂದ ತನಿಖೆ ವಹಿಸಿಕೊಂಡೆನೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳವು ದೂದಿಹಳ್ಳಿಯ ಮುಖ್ಯ ರಸ್ತೆ ಎಂದರೆ ಸರಿ. ಅದು ಸುಮಾರು 15 - 18 ಅಡಿ ಅಗಲದ ಡಾಂಬರ ರಸ್ತೆ ಎಂದರೆ ಸರಿಯಲ್ಲ. ಅದು ಡಾಂಬರ ರಸ್ತೆ ಎಂದರೆ ಸರಿ. ಆ ಸ್ಥಳದ ಅಕ್ಕ ಪಕ್ಕದಲ್ಲಿ 5-6 ಮೀಟರ ಅಗಲದ ಮಣ್ಣಿನ ರಸ್ತೆ ಇದೆ ಎಂದರೆ ಸರಿಯಲ್ಲ. ಆ ಸ್ಥಳದ ಅಕ್ಕ ಪಕ್ಕದಲ್ಲಿ 5-6 ಮೀಟರ ಅಗಲದ ಮಣ್ಣಿನ ರಸ್ತೆ ಇದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳವು ತಿರುವಿನಿಂದ ಕೂಡಿದೆ ಎಂದರೆ ಸರಿಯಲ್ಲ.

2. ಸಾಮಾನ್ಯವಾಗಿ ಜನರು ಮಣ್ಣಿನ ರಸ್ತೆಯಲ್ಲಿ ತಿರುಗಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ ಇಬ್ಬನಿ ಬೀಳುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಏಪ್ರಿಲ್ ತಿಂಗಳಲ್ಲಿ ಇಬ್ಬನಿ ಬಿದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಬ್ಬನಿಯು 6-00 ರಿಂದ 6-30 ರವರೆಗೆ ಇರುತ್ತದೆ ಎಂದರೆ ಸರಿಯಲ್ಲ.

3. ಮೃತ ಹೇಮಪ್ಪನು ಮಣ್ಣಿನ ರಸ್ತೆಯಲ್ಲಿ ತಿರುಗಾಡದೇ ಮುಖ್ಯ ರಸ್ತೆಗೆ ದುಡುಕಿನಿಂದ ಬಂದಿದ್ದರಿಂದಲೇ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿಗೆ ನೋಟಿಸ ಕೊಟ್ಟಿಲ್ಲ, ಆತನೇ ಬಂದು ಹಾಜರಾಗಿದ್ದಾನೆ. ನಾನು ಆರೋಪಿಗೆ ನೋಟಿಸ ಕೊಟ್ಟಿಲ್ಲ, ಆತನೇ ಬಂದು ಹಾಜರಾಗಿದ್ದಾನೆಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಯಾವುದೇ ಉತ್ತರ ಪಡೆದಿಲ್ಲವೆಂದರೆ ಸರಿ. ಆರೋಪಿಗೆ ಪಿಟ್ಸ್ ಬರುತ್ತದೆ ಆತನು ಮಾನಸಿಕ ಅಸ್ವಸ್ಥನೆಂದರೆ ಸರಿಯಲ್ಲ.



ಈ ಸಂಗತಿ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ನಿರ್ಲಕ್ಷ್ಯ ಅಥವಾ ಅಜಾಗೂರುಕತೆಯಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

4. ಸ್ಥಳ ಪಂಚನಾಮೆಗೆ 12-45 ಗಂಟೆಗೆ ಹೋಗಿದ್ದೆ. ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿದ್ದೇನೆ, ಪೋಟೋ ತೆಗೆದಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅವುಗಳನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಪಂಚರ ಸಮಕ್ಷಮ ಶವ ಪಂಚನಾಮೆ ಮಾಡಿಲ್ಲ, ಪೋಟೋ ತೆಗೆದಿಲ್ಲವೆಂದರೆ ಸರಿಯಲ್ಲ. ಲಾರಿ ಜಪ್ತಿ ಮಾಡಿದ್ದೆನೆಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ಚಾಸಾ-4 ರಿಂದ 12 ರವರ ಹೇಳಿಕೆ ಪಡೆದಿಲ್ಲವೆಂದರೆ ಸರಿಯಲ್ಲ. ಚಾಸಾ-14 ರವರಿಂದ ತಾಂತ್ರಿಕ ವರದಿ ಪಡೆದಿದ್ದೇನೆಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ್ದೇನೆಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಎಲ್ಲವೂ ಸುಳ್ಳು ಎಂದರೆ ಸರಿಯಲ್ಲ. ಮೃತನ ವಾರಸುದಾರರಿಗೆ ಪರಿಹಾರ ಕೊಡಿಸಲೆಂದು, ಆರೋಪಿತನ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 23-06-2026

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು